


International Journal of Kannada Research
www.kannadajournal.com

ISSN: 2454–5813
IJKR 2023; 9(3): 99-108
© 2023 IJKR
www.kannadajournal.com
Received: 03-06-2023
Accepted: 08-07-2023

**ಪ್ರಭಾವತಿ. ಜೆ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಂ. ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮತ್ತೀಕೆರೆ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಪ್ರಭಾವತಿ. ಜೆ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಸಹಾಯಕ ಪ್ರಾಧ್ಯಾಪಕರು, ಎಂ. ಎಸ್. ರಾಮಯ್ಯ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಮತ್ತೀಕೆರೆ, ಬೆಂಗಳೂರು, ಕರ್ನಾಟಕ, ಭಾರತ

# ಕಾರಂತರ ಕಾದಂಬರಿಗಳಲ್ಲಿ ಪರಂಪರೆ ಮತ್ತು ಪ್ರತಿರೋಧ ನೆಲೆಗಳು

**ಪ್ರಭಾವತಿ. ಜೆ**

**DOI:** https://doi.org/10.22271/24545813.2023.v9.i3b.869

## ಪ್ರಸ್ತಾವನೆ

ಪರಂಪರೆ ಮಾನವ ಬದುಕು ಧರಿಸಿಕೊಂಡ ಒಂದೇ ಅವಿಚ್ಛಿನ್ನ, ನಿರಂತರ, ಕ್ರಮಾಗತ ವಿಕಾಸದ ಮುಂದುವರಿಕೆಯನ್ನು ಸೂಚಿಸುವ ಪದ. ಸಂಸ್ಕೃತಿ, ಆಚಾರ, ವಿಚಾರ, ರೀತಿ, ನೀತಿ ಸಂಪ್ರದಾಯ ವಿಷಯಗಳು ಇದರ ಅಂತರ್ಗತ ಅಂಶ. ''ಶತಮಾನಗಳಿಂದ ಹಿಡಿದು ಈ ಕ್ಷಣದವರೆಗೆ ಬದುಕಿನಲ್ಲಿ ವಿಶೇಷವಾಗಿ ವ್ಯಾಪಿಸಿಕೊಂಡು ಬಂದಿರುವ ಮಾನವ ಸಮಸ್ತ 'ಅಭಿವ್ಯಕ್ತಿ' (Expression) ಮತ್ತು ಸಮಸ್ತ ನಡವಳಿಕೆ (Performance) ಯೇ ಪರಂಪರೆ." ಈ ಪರಂಪರೆಯನ್ನು ರೂಪಿಸಿರುವುದು ಮೌಲ್ಯಗಳು. ಸಂಸ್ಕೃತಿಯೊಂದಿಗಿನ ಸಾಮಾಜಿಕ ರೀತಿ ನೀತಿಗಳು, ಸಾಂಪ್ರದಾಯಿಕ ನಿಯಮಗಳು ಮೌಲ್ಯಗಳ ರೂಪದಲ್ಲಿ ಪ್ರತಿಫಲಿತವಾಗುತ್ತದೆ. ಹೀಗೆ ಪರಂಪರೆ, ಸಂಸ್ಕೃತಿ, ಮೌಲ್ಯಗಳು ಪರಸ್ಪರ ಪ್ರತ್ಯೇಕಿಸಲಾರದಷ್ಟು ತಾದಾತ್ಮ ಹೊಂದಿವೆ.

ಪರಂಪರೆಯು ಹುಟ್ಟಿಸಿಕೊಂಡ ಅರ್ಥಹೀನ ಆಚರಣೆಗಳ ಬಗೆಗೆ ಪ್ರತಿರೋಧ ವ್ಯಕ್ತಪಡಿಸುವುದೆಂದರೆ ಅದೊಂದು ಬಂಡಾಯವೇ ಆಗಿದೆ. ಮೌಲ್ಯ ವಿಘಟನೆ ಎಂದರೂ ಎನ್ನಬಹುದು. ಸಂಪ್ರದಾಯ, ಆಚಾರ, ವಿಚಾರಗಳ ಹೆಸರಿನಲ್ಲಿ ಹತ್ತಿಕ್ಕಲ್ಪಟ್ಟ ನಮ್ಮ ಭಾವನೆ ಮಾನಸಿಕ ಸ್ಥಿತಿಗಳು ಒಮ್ಮೆಲೆ ಆಸ್ಫೋಟಿಸಿ ತೋರಿಸುವ ಪ್ರತಿಭಟನೆಯೇ 'ಪ್ರತಿರೋಧ': "ನಮ್ಮ ಮನೋವೃತ್ತಿಯನ್ನು ಬರಿಯ ಭಾವಾವೇಶದಿಂದ ಎಷ್ಟೆಷ್ಟು ಅದುಮಿಡಲು ಪ್ರಯತ್ನಿಸುತ್ತೇವೆಯೊ, ಅದು ಅಷ್ಟಷ್ಟು ಪ್ರತಿರೋಧವನ್ನುಂಟು ಮಾಡುತ್ತದೆ' ಎನ್ನುತ್ತಾರೆ ಶಿವರಾಮ ಕಾರಂತರು. ಬಂಡಾಯದ ಒಂದು ರೂಪವೇ ಈ ಪ್ರತಿರೋಧ. ಇದೂ ಒಂದು ಬಗೆಯ ಮಾನಸಿಕ ಸ್ಥಿತಿ, ಪರಂಪರೆಯ ನಂಬಿಕೆಗಳನ್ನು ಬಂಡೆದ್ದು ಪ್ರತಿಭಟಿಸುವ ರೀತಿ, ಮೌಲ್ಯ ಸಂಘರ್ಷದಲ್ಲಿ ಹುಟ್ಟಿದ ಒಂದು ಕಿಡಿ. ಪರಂಪರೆಯ ಯಜಮಾನ್ಯ ಪ್ರವೃತ್ತಿ ಮಹಿಳೆಯ ಭಾವ ಭಾವನೆ ಹತ್ತಿಕ್ಕುವಲ್ಲಿ ಬಳಸುವ ತಂತ್ರಗಾರಿಕೆಯನ್ನು ವಿರೋಧಿಸುವ ಬಗೆಯೇ ಈ ಪ್ರತಿರೋಧ.

## ವಿವರಣೆ

ಸಾಂಸ್ಕೃತಿಕ ಪರಿಸರದಂತೆ ಪರಂಪರೆಯೂ ಯಜಮಾನ್ಯದ ಪರಿಧಿಯ ಆಚೆ ಇರುವುದಿಲ್ಲ. ಬೌದ್ಧಿಕ ಹುನ್ನಾರಗಳಿಂದಲೇ ತನ್ನ ಬಲವನ್ನು ಸ್ಥಾಪಿಸುವುದು ಯಜಮಾನ್ಯದ ಪ್ರಮುಖ ಲಕ್ಷಣ. ಯಜಮಾನ್ಯದ ಮುಂದುವರಿಕೆ ಪರಂಪರೆಯ ಮುಂದುವರಿಕೆಯೇ ಆಗಿದೆ. ಯಜಮಾನ್ಯವನ್ನು ವಿರೋಧಿಸುವುದೆಂದರೆ ಪರಂಪರೆ, ಸಂಸ್ಕೃತಿ, ಮೌಲ್ಯಗಳನ್ನು ಪ್ರಶ್ನಿಸಿದಂತೆಯೇ ಆಗುತ್ತದೆ. ಯಜಮಾನ್ಯ ಮತ್ತು ಅದಕ್ಕೆ ಪ್ರತಿಯಾಗಿ ಬರುವ ಪ್ರತಿರೋಧದ ಸಂಘರ್ಷದ ಮುಖ್ಯ ನೆಲೆ ಈ ಪರಂಪರೆಯದ್ದಾಗಿದೆ. ಕಾರಂತರ

ಕಾದಂಬರಿಗಳು ಎದುರಿಸುವ ಸಂಕೀರ್ಣ ಸಮಸ್ಯೆಗಳು ಯಜಮಾನ್ಯವನ್ನು ಮುಂದಿಟ್ಟುಕೊಂಡು ಪರಂಪರೆ ಮತ್ತು ಪ್ರತಿರೋಧದ ನೆಲೆಯನ್ನಾಶ್ರಯಿಸಿದೆ. ಪರಂಪರೆಯನ್ನು ಒಪ್ಪುವ, ಅದರಲ್ಲೇ ಬದುಕುವ ಸ್ತ್ರೀಯರು ಎಷ್ಟು ಮುಖ್ಯರಾಗಿ ಕಾಣುತ್ತಾರೋ, ಅದಕ್ಕೆ ವಿರುದ್ಧವಾಗಿ ಬಂಡೆದ್ದ ಮಹಿಳಾ ಸಂವೇದನೆಯನ್ನು ದಾಖಲಿಸುವುದೂ ಅವರಿಗೆ ಮುಖ್ಯವಾಗುತ್ತದೆ. ಅಂತಹ ಮಹಿಳೆಯರ ಬಗೆಗೆ ಅವರಿಗೆ ಗೌರವ ಮೆಚ್ಚುಗೆಗಳೂ ಇವೆ. ಆದರೆ ಪರಂಪರೆಯ ಒಳಗಿದ್ದು ಕೊಂಡು, ಅದೇ ಪರಂಪರೆಯ ಮೂಲಕವೇ ಇಂಥ ವ್ಯಕ್ತಿಗಳು ಸಶಕ್ತರಾಗಿ ಬೆಳೆಯುವುದನ್ನು ಗೌರವ ಮೆಚ್ಚುಗೆಗಳಿಂದ ಕಾರಂತರು ಗುರುತಿಸುವಲ್ಲಿ, ಇಂಥ ಪರಿಸರವನ್ನು ಎದುರಿಸುವ ವ್ಯಕ್ತಿಗಳ ಎಲ್ಲ ಮನೋದೈಹಿಕ ತುಡಿತಗಳನ್ನು ಏಕೆ ಪರೀಕ್ಷೆಗೆ ಒಡ್ಡುವುದಿಲ್ಲ? ಎಂಬ ಪ್ರಶ್ನೆಯನ್ನು ವಿಮರ್ಶಕರು ಎತ್ತಿದ್ದಾರೆ. ಇಲ್ಲಿನ ಬಹುಪಾಲು ಹೆಣ್ಣುಗಳು ಹೊರಡಿಸುವ ಪ್ರತಿಭಟನೆ ಗಂಡಸಿನ ಅಧಿಕಾರ, ಯಜಮಾನ್ಯ ಪ್ರಜ್ಞೆಯ ಒಳಗಿನ ಕ್ರೌರ್ಯವನ್ನು ಮನೋದೈಹಿಕ ತುಡಿತವನ್ನೇ ಆಧರಿಸಿದೆ. ಈ ಪ್ರತಿಭಟನೆ ಸೂಚಿಸುವ ಅರ್ಥ ನೈತಿಕ ಪ್ರಶ್ನೆಯನ್ನು ಅಡಗಿಸಿ ನಿಲ್ಲುತ್ತದೆ. ಸಿ.ಎನ್. ರಾಮಚಂದ್ರನ್ ಗುರುತಿಸುವಂತೆ ಕಾರಂತರಲ್ಲಿ ಕೆಲವೊಮ್ಮೆ ಪರಸ್ಪರ ವಿರುದ್ಧ ಧೋರಣೆಗಳು ಒಟ್ಟಿಗೆ ದುಡಿಯುತ್ತವೆ. ಒಂದೆಡೆ ಬಂಡಾಯದ ಕಾರಂತರ ನೈತಿಕ ಪ್ರಶ್ನೆಯೊಂದಿಗೆ ಮುಖಾಮುಖಿಯಾಗಿ ನಿಂತರೆ ಇನ್ನೊಂದೆಡೆ ಸಾಂಪ್ರದಾಯಿಕ ಧೋರಣೆಯುಳ್ಳ ಕಾರಂತರು ನಿಷ್ಟುರ ಆದರ್ಶವಾದಿಯಾಗಿಯೂ ಕಾಣುತ್ತಾರೆ. ವಾಸ್ತವವಾದವೂ, ಮಾನವತಾವಾದವೂ, ಆದರ್ಶವೂ ಸಂಪ್ರದಾಯವೂ, ಬಂಡಾಯ, ಪ್ರತಿರೋಧ ಇವು ಒಬ್ಬೊಟ್ಟಿಗೆ ಕಾಣಿಸುವುದು ಕಾರಂತರ ವ್ಯಕ್ತಿತ್ವದ ವಿಶಿಷ್ಟತೆಯಾಗಿದೆ. ಬದಲಾದ ಸಮಾಜದ ಜೀವನ ಕ್ರಮ ಮೌಲ್ಯಗಳನ್ನು ಗುರುತಿಸುವ ಪ್ರಮುಖ ಸಾಂಸ್ಕೃತಿಕ ದಾಖಲೆಗಳಾಗಿ ಕಾರಂತರ ಕಾದಂಬರಿಗಳು ಸಾರ್ವಕಾಲೀನ ಮೌಲಿಕತೆಯನ್ನು ಪಡೆಯುತ್ತವೆ. ಅವು ಕೆಲವೊಮ್ಮೆ ರಂಜಿಸುತ್ತವೆ, ಕದಡುತ್ತವೆ, ಗಂಭೀರ ಚಿಂತನೆಗೂ ತೊಡಗಿಸುತ್ತವೆ. ವಿವಾಹದ, ಕುಟಂಬದ ಸಾಂಪ್ರದಾಯಿಕ ಚೌಕಟ್ಟಿನ ಆಚೆ ಫಲಿಸುವ ಲೈಂಗಿಕ ಸಂಬಂಧಗಳು ಕ್ರಮೇಣ ಹೊಸ ದಾಂಪತ್ಯದ ಚೌಕಟ್ಟೊಂದನ್ನೂ ತಾವೇ ಸೃಷ್ಟಿಸಿಕೊಳ್ಳುವ, ಆ ಮೂಲಕ ಸಾಮಾಜಿಕ ಮಹತ್ವವನ್ನೂ ಪಡೆಯುವ ಚಿತ್ರಣಗಳನ್ನು ಹೊಂದಿರುವ '"ನಂಬಿದವರ ನಾಕ ನರಕ'', ಧರ್ಮರಾಯನ ಸಂಸಾರದಂತಹ ಕಾದಂಬರಿಗಳಲ್ಲಿ ದಾಂಪತ್ಯದ ಸೋಲನ್ನು ಪ್ರಜ್ಞಾಪೂರ್ವಕವಾಗಿ ಒಪ್ಪಿಕೊಳ್ಳುವಂತೆ, ಹೊಸ ದಾಂಪತ್ಯದ ಗೆಲುವನ್ನು ಇತ್ಯಾತ್ಮಕ ಸಂಬಂಧಗಳೆಲ್ಲೇ ಒಪ್ಪಿಕೊಳ್ಳುತ್ತಾರೆ. ಅದಕ್ಕೆ ಸಕಾರಣ ಸಮರ್ಥನೆಯನ್ನೇ ನೀಡುತ್ತಾರೆ. ಇಲ್ಲಿಯ ಸತ್ಯಭಾಮೆ ಸರಸ್ವತಿಯರ ವರ್ತನೆಗಳು ನಮ್ಮ ಸಂಸ್ಕೃತಿ, ಪರಂಪರೆಗೆ ಇದಿರು ನಿಂತು ಆರೋಗ್ಯಕರ ನವ್ಯ ಮೌಲ್ಯಪ್ರಜ್ಞೆಯೊಳಗೆ ಬದುಕನ್ನು ಪುನಃ ಕಟ್ಟುವಲ್ಲಿ ಅವರ ಬಂಡಾಯದ ಧ್ವನಿ ರೂಢಿಗತ ಸಮಾಜ ವ್ಯವಸ್ಥೆಗೆ ಸವಾಲೆಸೆಯುತ್ತದೆ.

ವ್ಯಕ್ತಿವಾದದ ನೆಲೆಯಲ್ಲಿ ಕಾರಂತರು ಮೊತ್ತಮೊದಲು ಸ್ತ್ರೀಯ ಸ್ವಾತಂತ್ರ್ಯದ ಪ್ರಶ್ನೆಯನ್ನೇ ಆಯ್ದುಕೊಳ್ಳುತ್ತಾರೆ. ಈ ವ್ಯವಸ್ಥೆಯಲ್ಲಿ ಸ್ತ್ರೀ ಯಾವ ವಿಧದ ಸ್ವಾತಂತ್ರ್ಯವೂ ಇಲ್ಲದೆ ಬದುಕಿನುದ್ದಕ್ಕೂ ಕಣ್ಣೀರಿನಲ್ಲಿಯೇ ಕೈ ತೊಳೆಯುತ್ತಾಳೆ. ಹೆಣ್ಣಿನ ಕಣ್ಣೀರು ಕಾರಂತರ ಹೃದಯವನ್ನು ಸಹಜವಾಗಿ ಕಲುಕಿದೆ. ಸಂಸಾರದ ಜವಾಬ್ದಾರಿ ಮತ್ತು ಲೈಂಗಿಕ ಕಟ್ಟು ಪಾಡುಗಳು ಕೇವಲ ಸ್ತ್ರೀಗೆ ಮಾತ್ರ ಅನ್ವಯಿಸುತ್ತದೆ. ಪುರುಷನಿಗಾದರೂ ಸಂಪೂರ್ಣ ಆರ್ಥಿಕ, ಸಾಮಾಜಿಕ, ಲೈಂಗಿಕ ಸ್ವಾತಂತ್ರ್ಯವಿದೆ. ಕುಟುಂಬ ವ್ಯವಸ್ಥೆಯೂ ಇಂತಹ ಕೌರವನ್ನು ವೇಶ್ಯೆಯಯ ದೃಷ್ಟಿಕೋನದಿಂದಲೂ, ಗೃಹಿಣಿಯ ದೃಷ್ಟಿಕೋನದಿಂದ ವಿಶ್ಲೇಷಿಸುವ ಕಾರಂತರು, ಈ ಸಮಾಜ ವ್ಯವಸ್ಥೆಯು ಪುರಷನಿಗೊಂದು ಮಾನದಂಡ ಸ್ತ್ರೀಗೊಂದು ಮಾನದಂಡವೆಂದು ನಿಷ್ಕರ್ಷಿಸುವ ರೀತಿಯನ್ನು ತಿರಸ್ಕರಿಸುತ್ತಾರೆ. ಸ್ತ್ರೀ ಪುರುಷರಿಬ್ಬರಿಗೂ ಸಮಾನ ಲೈಂಗಿಕ ಸ್ವಾತಂತ್ರ್ಯ ವಿರಬೇಕೆಂದು ವಾದಿಸುತ್ತಾರೆ. ಕಾರಂತರು ಕುಟುಂಬ ವ್ಯವಸ್ಥೆಯ ಕ್ರೌರ್ಯವನ್ನು ತಿರಸ್ಕರಿಸುತ್ತಾರೆಯೇ ಹೊರತು ಕುಟುಂಬವನ್ನಲ್ಲ' ಎಂಬ ಸಿ. ಎನ್, ರಾಮಚಂದ್ರನ್ ಅವರ ಅಭಿಪ್ರಾಯವನ್ನು ಒಪ್ಪಬೇಕು. ಇಲ್ಲಿಯ ಅಭಿಪ್ರಾಯಗಳ ಹಿನ್ನಲೆಯಲ್ಲಿ ಕಾರಂತರ ಸ್ತ್ರೀಪಾತ್ರ ಗಳು ಪರಂಪರೆಗೆ ಒಡ್ಡುವ ಪ್ರತಿರೋಧದ ಅಂಶವನ್ನು ಗಮನಿಸಬೇಕು.

## 'ಧರ್ಮರಾಯನ ಸಂಸಾರ'ದ ಮಹಾಲಕ್ಷ್ಮೀ, ಸರಸ್ವತಿ

'ಧರ್ಮರಾಯನ ಸಂಸಾರ' ಕಾರಂತರ ಬಂಡಾಯ ಮನೋಧರ್ಮವನ್ನು ಗರ್ಭೀಕರಿಸಿಕೊಂಡ ಒಂದು ಮಹತ್ವಪೂರ್ಣ ಕೃತಿ, ಹೆಣ್ಣಿನ ಮನೋವೃತ್ತಿ ಎಷ್ಟೆಷ್ಟು ದಮನಕ್ಕೆ, ಆಕ್ರಮಣಕ್ಕೆ, ಹತ್ತಿಕ್ಕುವುದಕ್ಕೆ ಒಳಗಾಗುತ್ತದೆಯೋ ಅಷ್ಟಷ್ಟು ಪ್ರತಿಭಟನೆಯ ಧ್ವನಿಯನ್ನು ಯಾವುದಾದರೊಂದು ರೂಪದಲ್ಲಿ ಪ್ರಕಟಗೊಳ್ಳುತ್ತದೆ ಎಂಬುದಕ್ಕೆ ಈ ಕೃತಿ ಉತ್ತಮ

ನಿದರ್ಶನ. ಮನೋವಿಜ್ಞಾನದ ಅಂತಃಚಕ್ಷುವಿನಲ್ಲಿ ಹೆಣ್ಣಿನ ಮಾನಸಿಕ ಹೊಯ್ದಾಟದ ಸ್ಥಿತಿಯನ್ನು ಚಿತ್ರಿಸುವ ಕಾರಂತರು ಅವಳಿಗೊದಗುವ ಮಾನಸಿಕ, ದೈಹಿಕ ಹಿಂಸೆಯ ಕರಾಳ ಮುಖವನ್ನು ಇಲ್ಲಿ ತೆರೆದಿಟ್ಟಿದ್ದಾರೆ. ಸುಪ್ತ ಪ್ರಜ್ಞೆಯಲ್ಲಿ ರೂಪುಗೊಳ್ಳುವ ಬಂಡಾಯದ ವಿನ್ಯಾಸ ಸಹಜತೆಯ ತಂತ್ರಗಾರಿಕೆಯೊಂದಿಗೆ ಅಭಿವ್ಯಕ್ತಗೊಂಡಿರುವುದನ್ನು ನೋಡಿದರೆ ಕಾರಂತರು ಹೆಣ್ಣಿನ ಮನೋಜಗತ್ತಿಗೆ ಎಷ್ಟು ಹತ್ತಿರವಾಗಿದ್ದಾರೆ ಎನ್ನುವುದು ತಿಳಿಯುತ್ತದೆ. ಸಾಮಾಜಿಕ ಕಟ್ಟು ಪಾಡುಗಳು ಸ್ತ್ರೀ ಬದುಕನ್ನು ಹೇಗೆ ನಿರ್ಬಂಧಿಸಿ ಅವಳದನಿಯನ್ನು ಅಡಗಿಸಿವೆ, ಕ್ರಮೇಣ ಒಳಗೊಳಗೆ ಕುದಿಯುತ್ತಿದ್ದ ಕುದಿ ತನ್ನಲ್ಲೇ ಗಟ್ಟಿಯಾಗಿ ಒಮ್ಮೆಲೆ ಹೇಗೆ ಆಸ್ಫೋಟಿಸುತ್ತದೆ ಎನ್ನುವುದನ್ನು ನಿರಂತರ ಕ್ರಿಯಾ ಸಂವಿಧಾನದಲ್ಲಿ ಕಾರಂತರು ಕಟ್ಟಿದ್ದಾರೆ. ಪ್ರತಿಭಟನೆಯು ಒಮ್ಮೆಲೇ ಕಾಣಿಸುವುದಿಲ್ಲ. ಒಂದು ಬಿಂದುವಿನಲ್ಲಿ ಸುಮ್ಮನೆ ಅಸ್ತವ್ಯಸ್ತವಾಗಿ ಸುಪ್ತಪ್ರಜ್ಞೆಯಲ್ಲಿ ಕಾಣಿಸಿಕೊಳ್ಳುತ್ತದೆ. ಇನ್ನೊಂದು ಬಿಂದುವಿನಲ್ಲಿ ತನ್ನ ಅಂತಶ್ಶಕ್ತಿಯನ್ನು ತುಂಬಿಸಿಕೊಳ್ಳುತ್ತದೆ. ಕೊನೆಯ ಬಿಂದುವಿನಲ್ಲಿ ಒಮ್ಮೆಗೇ ಭುಗಿಲೆದ್ದು ಆಸ್ಫೋಟಿಸುತ್ತದೆ. ಈ ಮೂರು ಬಿಂದುಗಳ ಅನುಭವ ಜಗತ್ತು ಒಂದಕ್ಕಿಂತ ಒಂದು ಭಿನ್ನವಾದರೂ ಇಲ್ಲಿಯ ಅಂತಸ್ಥ ಪ್ರತಿರೋಧ ಪ್ರೇರಣೆ ಮಾತ್ರ ಒಂದೇ, ಅದು ಪುರುಷಾಧಿಕಾರ, ಲಿಂಗರಾಜಕಾರಣ, ಲೈಂಗಿಕ ದೌರ್ಜನ್ಯ, ಈ ಮೂರು ಬಿಂದು ಅಥವಾ ಹಂತಗಳು ಕಾಣಿಸಿಕೊಳ್ಳುವ ವಲಯಗಳೂ ಮೂರು; ಸುಪ್ತವಲಯ, ಬಹಿರ್‌ವಲಯ, ಮತ್ತು ಕ್ರಿಯಾವಲಯ. ಇಲ್ಲಿಯ ಪಾತ್ರ ಮತ್ತು ಘಟನೆಗಳು ಈ ಮೂರು ವಲಯವನ್ನು ಆಶ್ರಯಿಸಿದೆ ಎಂಬುದು ಬಹಳ ಮುಖ್ಯವಾದ ಸಂಗತಿ.

## 'ನಂಬಿದವರ ನಾಕನರಕ'ದ ಸತ್ಯಭಾಮೆ, ವಾಗ್ದೇವಿ

ಹೆಣ್ಣಿನ ಮಾನಸಿಕ ಪ್ರಪಂಚ ಹೆಚ್ಚು ಸಂಕೀರ್ಣ ಮತ್ತು ಜಟಿಲ. ಧರ್ಮ, ಸಂಪ್ರದಾಯ, ಆಚಾರ, ವಿಚಾರಗಳು ಅವಳ ಮಾನಸಿಕ ಜಗತ್ತನ್ನು ಹೆಚ್ಚು ದ್ವಂದ್ವಕ್ಕೆ ತಳ್ಳಿವೆ. ಇಂಥ ಸಂದರ್ಭಗಳಲ್ಲಿ ದೇಹ ಮತ್ತು ಮನಸ್ಸುಗಳು ಒಂದಕ್ಕೊಂದು ಪೂರಕವಾಗಿ ನಡೆಯುವುದೇ ಕಠಿಣ. ಬದಲಾವಣೆಯನ್ನು ದೇಹ ಒಂದು ರೀತಿ ಸ್ವೀಕರಿಸಿದರೆ, ಮನಸ್ಸು ಇನ್ನೊಂದು ರೀತಿ ಸ್ವೀಕರಿಸುತ್ತದೆ. ದೇಹ ಮನಸ್ಸುಗಳು ಒಂದಕ್ಕೊಂದು ಹೊಂದಾಣಿಕೆಯನ್ನು ಮಾಡಿಕೊಳ್ಳಲು ಸಾಧ್ಯವಾಗದಾಗ ವ್ಯಕ್ತಿಯ ಬದುಕು ಸಂಘರ್ಷ ತಾಕಲಾಟಗಳನ್ನು ಎದುರಿಸಬೇಕಾಗುತ್ತದೆ. ಮನೋವೈಕಲ್ಯ ಇದರ ಇನ್ನೊಂದು ಪರಿಣಾಮ. ಅಸಾಹಾಯಕತೆಯೂ ಇದರ ಭಾಗ. ಒಮ್ಮೊಮ್ಮೆ ಇದರಿಂದ ಹೊರಬರಲು ಸಿಡಿದು ಸಮಾಜವನ್ನು ಧಿಕ್ಕರಿಸಿ ನಡೆಯುವುದೂ ಉಂಟು. ಧಿಕ್ಕರಿಸಿ ನಡೆಯಲು ಆಗದ ಸನ್ನಿವೇಶಗಳಲ್ಲಿ ಬದುಕು ದುರಂತವಾಗುವ ಸಂಭವನೀಯತೆಯೂ ಇದೆ. ಈ ಎರಡೂ ದ್ವಂದ್ವಗಳನ್ನು ತನ್ನೊಳಗೆ ತಾನೆ ಬಿಚ್ಚಿಕೊಳ್ಳುವ ಸತ್ಯಭಾಮೆ, ವಾಗ್ದೇವಿಯರ ಪಾತ್ರಗಳು "ನಂಬಿದವರ ನಾಕ ನರಕ' ದ ಕೇಂದ್ರ ಸಮಸ್ಯೆಗಳಾಗಿವೆ. ಪಾತ್ರ ಮತ್ತು ಘಟನೆಯ ದೃಷ್ಟಿಯಿಂದ ಇವೆರಡು ಪಾತ್ರಗಳು ಒಂದಕ್ಕೊಂದು ಪೂರಕ, ಪೋಷಕವಲ್ಲ. ಧರ್ಮರಾಯನ ಸಂಸಾರದ ಮಹಾಲಕ್ಷ್ಮಿ, ಸರಸ್ವತಿಯಂತೆ ಒಂದು, ಇನ್ನೊಂದು ಪಾತ್ರದಿಂದ ಪ್ರಭಾವವನ್ನಾಗಲಿ, ಪ್ರೇರಣೆಯನ್ನಾಗಲಿ ಪಡೆಯುವುದಿಲ್ಲ. ಆದರೂ ಇವೆರಡರ ನಡುವೆ ಸೂಕ್ಷ್ಮ ತಾತ್ವಿಕ ಸಂಬಂಧವಿದೆ. ಈ ಎರಡು ವಿಭಿನ್ನ ಪಾತ್ರಗಳು ಒಮ್ಮೊಮ್ಮೆ ಒಂದೇ ನಾಣ್ಯದ ಎರಡು ಮುಖಗಳಾಗಿ ಕಾಣುತ್ತವೆ; ಬದುಕಿನ ಒಂದು ಸಾಧ್ಯತೆ ಎರಡು ಸಾಧ್ಯತೆಯಾಗಿ ತೋರಿಸುವಂತೆ ಭಾಸವಾಗುತ್ತದೆ. ಇಲ್ಲಿಯ ಸಾಮಾನ್ಯ ಅಂಶವೆಂದರೆ ಇಬ್ಬರೂ 'ನಂಬಿಕೆ' ಯ ತಳಹದಿಯ ಮೇಲೆ ನಿಂತವರು; ಇಬ್ಬರೂ ಪರಿತ್ಯಕ್ತೆಯರು. ವಾಗ್ದೇವಿ ತನ್ನ ತಂದೆ, ತಾಯಿ ಕುಟುಂಬ ವರ್ಗದಿಂದ, ಬಂಧುವರ್ಗದಿಂದ ತ್ಯಜಿಸಲ್ಪಟ್ಟವಳು. ತನ್ನ ಕೈ ಹಿಡಿದ ಗಂಡನನ್ನು ಮನಸ್ಸಿನಿಂದ ತ್ಯಜಿಸಿದವಳು. ಸತ್ಯಭಾಮೆಯ ವಿಷಯದಲ್ಲಿ ಮಾತ್ರ ಅವಳ ವಿನಾಕಾರಣವಾಗಿ ಗಂಡನಿಂದ ತ್ಯಜಿಸಲ್ಪಟ್ಟವಳು. ಇಲ್ಲಿಯ ಭಿನ್ನತೆಯ ಅಂಶವೆಂದರೆ, ವಾಗ್ದೇವಿ ಸಮಾಜದಿಂದ ಶೋಷಣೆಗೆ ಒಳಗಾಗಲ್ಪಟ್ಟವಳು. ಅವಳು ಹೆಣೆದುಕೊಂಡ ಬಲೆಯು ಅವಳಿಗೆ ಉರುಳಾಗಿದೆ. ಅವಳ ನಂಬಿಕೆಯೇ ಅವಳಿಗೆ ನರಕವಾಗಿದೆ ಬದುಕನ್ನು ದುರಂತದೆಡೆಗೆ ಸಾಗಿಸಿದೆ. ಆದರೆ, ಸತ್ಯಭಾಮೆ ಹಾಗಲ್ಲ. ಪತಿಯಿಂದ ಪರಿತ್ಯಕ್ತಳಾದವಳು. ತವರು ಮನೆ, ಗಂಡನ ಮನೆ ಎರಡರ ಆಸರೆಯನ್ನೂ ಪಡೆದವಳು. ಸಂದರ್ಭವಶಾತ್ ಅತ್ತೆಯ ತಿರಸ್ಕಾರಕ್ಕೆ ಒಳಗಾದರೂ ಮೈದುನರ ಪ್ರೀತಿ ಗಳಿಸಿಕೊಂಡವಳು. ತನ್ನ ಸಹಜ ದೈಹಿಕ ಭಾವನೆಗಳ ಸಾಧನೆಗಾಗಿ ಧಾರ್ಮಿಕ ಚೌಕಟ್ಟನ್ನು ಮೀರಿ ಹೊಸಬಾಳಿಗಾಗಿ ಹಂಬಲಿಸಿ ಅದನ್ನು ಸಾಧಿಸಿಕೊಂಡವಳು. ಇನ್ನೊಂದರ್ಥದಲ್ಲಿ ತನ್ನ ಮೇಲೆಯೇ ತಾನೇ ನಂಬಿಕೆ ಇರಿಸಿಕೊಂಡು ಅಪರಿಚಿತ ವಿನಾಯಕನೊಡನೆ ಯಾರಿಗೂ ಗೊತ್ತಿಲ್ಲದಂತೆ ವೈವಾಹಿಕ ಬಂಧನಕ್ಕೆ ಒಳಗಾಗಿ ಬದುಕನ್ನು ನಾಕ ಮಾಡಿಕೊಂಡವಳು (ಸ್ವರ್ಗ ಮಾಡಿಕೊಂಡವಳು). ಈ ಎರಡು ಸ್ತ್ರೀ ಪಾತ್ರಗಳ ಮೂಲಕ ಕಾರಂತರು

ನಮ್ಮ ನಮ್ಮ ನಂಬಿಕೆಯ ಆಳವನ್ನು ಶೋಧಿಸಿದ್ದಾರೆ. ವಾಗ್ದೇವಿಗೆ ನರಕವಾದ ಜೀವನವೇ, ಸತ್ಯಳ ಒಂದು ಧೈಯ್ಯದ ಹೆಜ್ಜೆಯಿಂದಾಗಿ ಸ್ವರ್ಗವಾಗುವ ಸಾಧ್ಯತೆಯನ್ನು ಕಾದಂಬರಿಕಾರರು ತೋರಿಸಿದ್ದಾರೆ. ಗಂಡನಿಂದ ತ್ಯಜಿಸಲ್ಪಟ್ಟವಳು ಮರುಮದುವೆಯ ದಾರಿಯಲ್ಲಿ ಮುನ್ನಡೆಯ ಬಹುದಾದ ಸಾಧ್ಯತೆಯನ್ನು ಕಾದಂಬರಿಕಾರ ಕಾರಂತರು ತೋರಿಸಿದ್ದಾರೆ. ಗಂಡನಿಂದ ತ್ಯಜಿಸಲ್ಪಡುವುದಕ್ಕೂ, ಗಂಡನನ್ನೇ ತ್ಯಜಿಸುವುದಕ್ಕೂ ಇರುವ ಸೂಕ್ಷ್ಮ ಸಂಬಂಧಾಂತರವೂ ಈ ಕಾದಂಬರಿಯಲ್ಲಿ ಧ್ವನಿತವಾಗಿದೆ. ಇಲ್ಲಿಯ ಎರಡೂ ಪಾತ್ರಗಳು ಪ್ರತಿಭಟನೆಯ ತಳಪಾಯದಲ್ಲೇ ಬೆಳೆದರೂ ಒಂದು ಇತ್ಯಾತ್ಮಕವೂ ಇನ್ನೊಂದು ನೇತ್ಯಾತ್ಮಕವೂ ಆದ ಪರಿಣಾಮದಲ್ಲಿ ಕೊನೆಗೊಂಡಿದೆ. ಸತ್ಯಭಾಮೆಯ ಪ್ರತಿಭಟನೆ ಇತ್ಯಾತ್ಮಕವಾದದ್ದು. ಆದರೆ ವಾಗ್ದೇವಿಯ ಪ್ರತಿಭಟನೆ ನೇತ್ಯಾತ್ಮಕ ಪರಿಣಾಮವನ್ನು ಹೊಂದಿರುವಂತದ್ದು. ' ವಿವಾಹದ, ಕುಟುಂಬದ ಸಾಂಪ್ರದಾಯಿಕ ಚೌಕಟ್ಟಿನ ಆಚೆ ಫಲಿಸುವ ಲೈಂಗಿಕ ಸಂಬಂಧಗಳೂ ಕ್ರಮೇಣ ಹೊಸ ದಾಂಪತ್ಯದ ಚೌಕಟ್ಟೊಂದನ್ನು ತಾವೇ ತಾವಾಗಿ ಸೃಷ್ಟಿಸಿಕೊಳ್ಳುವ, ಆ ಮೂಲಕ ಸಾಮಾಜಿಕವಾಗಿಯೂ ಮಹತ್ವ ಪೂರ್ಣವಾಗುವ ಬಗೆಯನ್ನು ಕಾರಂತರು 'ನಂಬಿದವರ ನಾಕ ನರಕ' ಮತ್ತು ''ಧರ್ಮರಾಯನ ಸಂಸಾರ'' ದಂಥ ಕಾದಂಬರಿಗಳಲ್ಲಿ ಗುರುತಿಸುತ್ತಾರೆ.'' ಎಂಬ ಟಿ.ಪಿ. ಅಶೋಕರ ಮಾತನ್ನು ಇಲ್ಲಿ ಗಮನಿಸಬೇಕು. ಈ ಮಾತಿನ ಹಿನ್ನೆಲೆಯಲ್ಲಿ ಸತ್ಯಭಾಮೆಯ ಪಾತ್ರವನ್ನು ವಿಶ್ಲೇಷಿಸಬಹುದು.

## ಸರಸಮ್ಮನ ಸಮಾಧಿ' ಯ ಬೆಳ್ಯಕ್ಕ, ಸುನಾಲಿನಿ, ಭಾಗೀರಥಿ

'ಸರಸಮ್ಮನ ಸಮಾಧಿ'ಯ ಸ್ತ್ರೀ ಸಂವೇದನೆಯ ಸ್ವರೂಪ ಸುನಾಲಿನಿ, ಭಾಗೀರಥಿಯಲ್ಲಿ ಪ್ರತಿರೋಧಿಸುವ ಅಂತಃಸತ್ವವನ್ನು ತುಂಬಿದೆ. ಮಹಾಸತಿ ಸರಸಮ್ಮನ ಅತೃಪ್ತ ಕಾಮನೆಗಳ ನೆರಳಿನ ರೂಪವನ್ನು ಪಡೆದ ಬೆಳ್ಯಕ್ಕ, ಪರಂಪರಾಗತ ಸತಿ ದಹನದ ನಂಬಿಕೆಯನ್ನು ಪ್ರತಿರೋಧಿಸಿ ಹುಟ್ಟಿಕೊಂಡ ಒಂದು ಕಿಡಿ. ಬೆಳ್ಯಕ್ಕ ತನ್ನ ಬಯಕೆ, ನೋವಿನ ಕತೆಯನ್ನೆಲ್ಲಾ ಚಂದ್ರಯ್ಯನೊಡನೆ ಹೇಳಿಕೊಳ್ಳುವಾಗ ಅವಳು ಪ್ರೇತರೂಪಕ್ಕೆ ಕಾರಣವಾದ ಅವಸ್ಥೆಯನ್ನು ಗಮನಿಸಬೇಕು. ಅವಳೆನ್ನುತ್ತಾಳೆ: ..... ನನ್ನ ಪತಿಗೆ ನಾನು ಬೇಡವಾಗಿದ್ದೆ. ನನಗೆ ಬೇಕಾದವನೊಬ್ಬನಿದ್ದ. ಅವನೊಂದಿಗಿರಲು ಶಾಸ್ತ್ರ, ಸಮಾಜಗಳೆರಡೂ ಅಡ್ಡವಾದವು. ಉಪಾಯಗಾಣದೆ ಶಾಸ್ತ್ರ ಹಿಂಬಾಲಿಸಿಯೇ, ನಾನೀ ಅವಸ್ಥೆಗೆ ಬಂದೆ. ಕೊನೆಯ ತನಕವೂ ನನ್ನ ಬಯಕೆ ಪತಿಯಿಂದ ಪೂರ್ಣವಾಗಲಿಲ್ಲ' ಎಂಬ ಅವಳ ದುಃಖ ಚಂದ್ರಯ್ಯನಿಗೆ ಅರ್ಥವಾಗಿದೆ. ಏಕೆಂದರೆ ಗಂಡನ ಹೇಡಿತನದಿಂದಾಗಿ ಪರಿತ್ಯಕ್ತಳಾದ ಭಾಗೀರಥಿ, ಸುನಾಲಿನಿಯರ ಸಜೀವ ತುಡಿತಕ್ಕೂ, ಅತೃಪ್ತ ಕಾಮನೆಗಳ ನೆರಳಿನ ರೂಪು ಪಡೆದ ಬೆಳ್ಯಕ್ಕನ ನಿರ್ಜೀವ ತುಡಿತಕ್ಕೂ ನಡುವಿನ ಕೇಂದ್ರ ಬಿಂದು ಚಂದ್ರಯ್ಯನೇ. ಈ ಮೂರು ಹೆಣ್ಣು ಜೀವಗಳ ಜೀವನವನ್ನು ಚೆನ್ನಾಗಿ ವಿಮರ್ಶಿಸಬಲ್ಲವನೆಂದರೆ ಅವನೊಬ್ಬನೇ. ಭಾಗೀರಥಿಯನ್ನು ವಿವಾಹ ಮಾಡಿಕೊಳ್ಳುವಲ್ಲಿ ಅವನು ತೋರುವ ಉತ್ಸಾಹ, ಸುನಾಲಿನಿಯ ಸ್ನೇಹ ಸಂಪಾದಿಸುವಲ್ಲಿ ಅವನು ತೋರುವ ಆಸಕ್ತಿ, ಹಾಗೆಯೇ ಬೆಳ್ಯಕ್ಕನೊಂದಿಗೂ ಛಾಯಾ ಗೆಳೆತನವನ್ನು ಬಯಸುವ ಅವನ ಸಹಾನುಭೂತಿ ಮಾನವೀಯ ನೆಲೆಯದು. ಜನರ ಪಾಲಿನ ಮಹಾಸತಿ ಸರಸಮ್ಮ, ತನ್ನದೇ ಗುಡಿಯೊಳಗೆ, ಇರಲು ಬಯಸುವುದಿಲ್ಲ. ಹೊಸ ಪ್ರೇಮಿ ಚಂದ್ರಯ್ಯನೊಂದಿಗೂ ವಿವಾಹ ಬಂಧನಕ್ಕೆ ಒಳಗಾಗಲು ಅದು ಪ್ರಶಸ್ತ ಸ್ಥಳವಲ್ಲವೆಂದು ಭಾವಿಸಬೇಕಾದರೆ ವ್ಯವಸ್ಥೆಯ ಕರಾಳಹಸ್ತ ಜೀವವಿಲ್ಲದ ಪ್ರೇತವನ್ನೂ ಹೇಗೆ ಬಂಧಿಸಿದೆ ಎನ್ನುವುದು ತಿಳಿಯುತ್ತದೆ. ಆದ್ದರಿಂದಲೇ ಬೆಳ್ಯಕ್ಕ ಚಂದ್ರಯ್ಯನೊಡನೆ ಗುಡಿಯೊಳಗೆ ಹೋಗುವುದಕ್ಕೆ ಹೆದರಿ ಬಯಲಿಗೆ ಓಡಿ ಬರುತ್ತಾಳೆ. ಶಾಸ್ತ್ರ, ಪುರಾಣದ ಪರಂಪರೆಯ ಜೀವ ವಿರೋಧಿ ನಿಲುವನ್ನು ಪ್ರತಿಭಟಿಸಲು ಸಾಧ್ಯವಾಗದೆ ಜೀವಂತ ದಹನಕ್ಕೆ ಒಳಗಾದ ಸರಸಮ್ಮ, ಬೆಳ್ಯಕ್ಕನೆಂಬ ಬೆಳಕಿನ ಶರೀರದಲ್ಲಿ ಪರಂಪರೆಯನ್ನು ಪ್ರತಿರೋಧಿಸುವ ಶಕ್ತಿಯನ್ನು ಪಡೆದುಕೊಳ್ಳುತ್ತಾಳೆ. ಬೆಳಕಿನ ಸೂಕ್ಷ್ಮ ಶರೀರದ ಬೆಳ್ಯಕ್ಕನ ಪ್ರತಿನಿಧಿಗಳೇ ಈ ಸುನಾಲಿನಿ ಮತ್ತು ಭಾಗೀರಥಿಯರು.

ಸುನಾಲಿನಿ, ವಿದ್ಯಾವಂತ ಗೃಹಿಣಿ. ಅಣ್ಣಪ್ಪ ಕಮ್ತಿಯವರ ಧರ್ಮಪತ್ನಿ. ಗಂಡನ ಪ್ರೀತಿ, ಸ್ನೇಹ ಸಹೃದಯತೆಗಾಗಿ ಕಾತರಿಸುವ ಅವಳದ್ದು ವಿಷಮ ದಾಂಪತ್ಯ, ಗಂಡನ ಸಕ್ಕರೆಯಂತಹ ಸವಿ ಮಾತನ್ನು ಬಯಸುವ ಸಹಜ ಕಾಮನೆಗಳು ಅವಳಿಗೆ ಉಣಲು, ಉಡಲು ಸಾಕಷ್ಟಿದ್ದರೆ ಸಾಕು, ಅದೇ ಹೆಣ್ಣಿನ ಬಾಳಿಗೆ ಬೇಕಾದ ತೃಪ್ತಿ ಎಂಬ ಅಭಿಪ್ರಾಯ ಅವಳ ಗಂಡ ಮತ್ತು ಅತ್ತೆಯದು. ಆದರೆ ಸುನಾಲಿನಿಯ ಪ್ರಕಾರ, ''ಅಷ್ಟು ಹಟ್ಟಿಯಲ್ಲಿರುವ ಗೋಪಿ ದನಕ್ಕೂ ಇದೆ'ಯಲ್ಲ? ತಮಗೂ ಅದಕ್ಕೂ ಏನೂ ವ್ಯತ್ಯಾಸವಿಲ್ಲವೆ? ಇದು ಅವಳ ಪ್ರಶ್ನೆ. ಬೆಳಗಿನಿಂದ ರಾತ್ರಿಯವರೆಗೂ ಅಂಗಡಿಯಲ್ಲೇ ದಿನ ಕಳೆಯುವ ಗಂಡ, ಮಧ್ಯಾಹ್ನ ಊಟಕ್ಕೆ ಬಂದರೂ ಮನೆಯಲ್ಲಿರುವುದು ಅಲ್ಪ ಕಾಲ. ಒಮ್ಮೆಲೆ ರಾತ್ರಿ ಹೊತ್ತು ಮೀರಿ ಮನೆಗೆ

ಬರುವುದು ಅವಳಲ್ಲಿ ಬೇಸರ ಹುಟ್ಟಿಸಿದೆ. ರಾತ್ರಿ ಮಲಗಿದ ಗಂಡನನ್ನು ಮಾತನಾಡಿಸುವುದೆಂದರೆ ಅದೊಂದು 'ವಿಶ್ವ ಪ್ರಯತ್ನ'. ಅಣ್ಣಪ್ಪ ಬಾಯಿ ತೆಗೆದರೆ ಬರೀ ಅಂಗಡಿ-ಧಾರಣೆ, ಹಣ ಇತ್ಯಾದಿ ವಿಷಯಗಳನ್ನು ಬಿಟ್ಟರೆ ಹೆಂಡತಿಗೆ ಬೇಕಾದ ಒಂದು ಸವಿಮಾತು ಅವನ ಬಾಯಿಯಿಂದ ಬಾರದು. ಹೆಂಡತಿಯ ಆಸೆ, ಆಕಾಂಕ್ಷೆಗಳನ್ನು ಕೇಳುವ ಸರಳ ಸಂವೇದನೆಯೂ ಇಲ್ಲದ ಗಂಡನೊಂದಿಗೆ ಬದುಕುವುದೆಂದರೆ ಹಟ್ಟಿಯಲ್ಲಿದ್ದ ಗೋಪಿ ದನದಂತೆ ಎನ್ನುವ ಸಂತಾಪ ಅವಳನ್ನು ಕಾಡಿದೆ. ಮದುವೆಯಾಗಿ ಏಳು ವರ್ಷಗಳು ಸಂದರೂ ದುಃಖವನ್ನೂ ಮರೆಸುವ ಒಂದು ಸಂತತಿಯೂ ಇಲ್ಲ. ಮನುಷ್ಯರ ಎಡೆಯಲ್ಲಿ ನಲಿಯುತ್ತಿದ್ದೂ ಅವಳು ಒಬ್ಬಂಟಿ. ತಂದೆಯೊಡನೆ ತನ್ನ ದುಃಖವನ್ನೆಲ್ಲ ಹೇಳಿಕೊಳ್ಳೋಣವೆಂದರೆ ಎಲ್ಲಿ ತಂದೆಗೆ ನೋವಾಗುತ್ತದೆಯೋ ಎಂಬ ದುಃಖ ಬೇರೆ. ಅವಳ ಗಂಡನೇನು ಸಾಮಾನ್ಯ ಜ್ಞಾನ ತಿಳಿಯದವನೇನಲ್ಲ. ಸಾಮಾನ್ಯ ವ್ಯವಹಾರ ಜ್ಞಾನವನ್ನು ಶಾಲೆಯಿಂದ ಕಲಿತವನು. ಅವನಿಗಿಲ್ಲದಿರುವುದು ದಾಂಪತ್ಯ ಜ್ಞಾನ. ಶಾಲೆಯಿಂದ ದಾಂಪತ್ಯ ಜೀವನ ಕಲಿಯಲು ಸಾಧ್ಯವೆ? ಹಾಗಾದರೆ? ಸಂಸಾರಕ್ಕೆ ನೆರವಾಗದ ವಿದ್ಯೆ, (ಸಂಪತ್ತು) ಎಷ್ಟಿದ್ದರೇನು? ಎರಡು ಅಪರಿಚಿತ ಹೆಣ್ಣು, ಗಂಡುಗಳನ್ನು ಬೇರೆ ಬೇರೆ ಬೆಳೆಯಿಸಿ, ಒಂದು ದಿವಸ ಅವರನ್ನು ಮಂಟಪದೊಳಗೆ ಕುಳ್ಳಿರಿಸಿ ದಾಂಪತ್ಯದಲ್ಲಿ ಬೆಸೆಯುತ್ತೇವೆ ಎಂಬುದು ಭ್ರಮೆಯಲ್ಲವೇ? ಇಂತಹ ಜಿಜ್ಞಾಸೆ ವ್ಯವಸ್ಥೆಯ ದಾಂಪತ್ಯ ಧರ್ಮವನ್ನು ಕೇಂದ್ರೀಕರಿಸಿಕೊಂಡು ಚಿಂತನೆಗೆ ತೊಡಗಿದೆ.

**'ಸ್ವಪ್ನದ ಹೊಳೆ'ಯ ಕೃಷ್ಣರಾಯ ಮತ್ತು ಬನ್ನಿ**

ಪರಂಪರೆಯ ಮೌಢ ಹೆಣ್ಣಿನ 'ಶೀಲ' 'ಅನೈತಿಕತೆ' ಯ ಪ್ರಜ್ಞೆಯ ಸುತ್ತ ಆವರಿಸಲ್ಪಟ್ಟಿದೆ. ಇದರ ವಿರುದ್ಧ ಬಂಡಾಯವೆದ್ದ ಹಲವು ಸ್ತ್ರೀ ಪಾತ್ರಗಳು ಹಿಂದೆ ಪುರುಷ ವರ್ಗದ ಬೆಂಬಲವಿರುವುದನ್ನು ಕಾಣಬಹುದು. 'ಸ್ವಪ್ನದ ಹೊಳೆ' ಯ ಕೃಷ್ಣರಾಯ (ಕಿಟ್ಟಣ್ಣ) ವ್ಯಕ್ತಿಗತ ನೆಲೆಯಲ್ಲಿ ಸ್ತ್ರೀ ಸಮಸ್ಯೆಯನ್ನು ಸ್ವೀಕರಿಸಿ ಪರಂಪರೆಯ ಮನೋಧರ್ಮವನ್ನು ಧಿಕ್ಕರಿಸಿ ನಡೆಯುವುದರಿಂದ ಇಂತಹ ಪುರುಷ ವರ್ಗದಿಂದ ಕೊಂಚ ಭಿನ್ನವಾಗಿ ಕಾಣುತ್ತಾನೆ. ಒಬ್ಬ ವಿದ್ಯಾವಂತನಾಗಿ, ಸಮಾಜದ ದೃಷ್ಟಿಯಲ್ಲಿ ಕಳಂಕಿತಳಾದ ಒಂದು ಹೆಣ್ಣು ಜೀವಕ್ಕೆ ಬದುಕು ನೀಡಿದ ಆದರ್ಶ ವ್ಯಕ್ತಿಯಾಗಿದ್ದಾನೆ. ಅವನ ಕಲ್ಪನೆಯಲ್ಲಿ ಪುರಾಣ ಪ್ರತಿಮೆಗಳು ಚಿರಂತನ ಲಿಂಗ ಸಮಸ್ಯೆಯ ಪ್ರತೀಕಳಾಗಿ ಕಾಣುತ್ತವೆ. ಬಾಲ್ಯದಲ್ಲಿಯೇ ಅವನು ಕಾಣುತ್ತಿದ್ದ ಅನಾದಿ ಕಾಲದ ಬಂಡೆ ಸ್ತ್ರೀ ಪುರುಷ ಜೀವ ಸಮಾಗಮದ ಸಾಕ್ಷಿಯಾಗಿ ನಿಂತಿದೆ. ಬಂಡೆ ಇದ್ದಕ್ಕಿದ್ದಂತೆ ಭೂತಾಕಾರವನ್ನು ತಳೆದು ತನ್ನ ಕಥೆ ಹೇಳಿದ ಹಾಗೆ ಭಾಸವಾಗುತ್ತದೆ. ಆ ಬಂಡೆಯ ಸುತ್ತ ಆದಿ ಮಾನವ ಜನಾಂಗಗಳು ಬತ್ತಲೆಯಾಗಿ ಕುಣಿಯುತ್ತಲೇ ಗಂಡು ಹೆಣ್ಣನ್ನು ಸೇರುವ 'ರಾಪ' (ಲೈಂಗಿಕ ಸಂಭೋಗ)ನ್ನು ಕಾಣುತ್ತಾನೆ. ಅದರಲ್ಲಿ ಯಾವ ನಾಚಿಕೆ, ಅಂಜಿಕೆಯೂ ಇಲ್ಲ. 'ಹಳೆಯ ಭೂತ' ಮಾತನಾಡಲು ತೊಡಗುತ್ತದೆ. ಎಲ್ಲವೂ ತನ್ನ ಲೀಲೆ, ತಾನೇ ಹೇತು ಎಂದು ಹೇಳುವ ಆ ಭೂತ ಗಂಡು-ಹೆಣ್ಣೆಂಬ ಪರಿಭೇದ ಹುಟ್ಟಿದಂದಿನಿಂದ ಅಲ್ಲಿ ನಿಂತಿದ್ದೇನೆ ಎನ್ನುತ್ತದೆ. ಗಂಡು ಹೆಣ್ಣುಗಳ ಭಾವ ಜೀವನ ನನ್ನ ಅಧೀನ, ನನ್ನನ್ನು ಯಾರೂ ಅಮಾನ್ಯ ಮಾಡುವಂತಿಲ್ಲ ಜೀವ ಸಂಕುಲ ಮುಂದುವರಿಯಲು ನಾನೇ ಕಾರಣ'' ಎಂದುಕೊಳ್ಳುತ್ತದೆ. ಸಂತಾನ ಪ್ರಾಪ್ತಿಯೇ ಇದರ ಹಿಂದಿನ ಉದ್ದೇಶವೆಂದು ಸಾರುವ ಆ ಬಂಡೆಯೇ ಇದ್ದಕ್ಕಿದ್ದಂತೆ ದೊಡ್ಡ ಗಾತ್ರದ ಲಿಂಗವಾಗುತ್ತದೆ.

ಗಂಡು ಹೆಣ್ಣಿನ ಸಂಬಂಧದ ವಿದ್ರೋಹ ನಾಗರಿಕ ಜಗತ್ತಿನ ಕೊಡುಗೆ. ಹೆಣ್ಣು ಗಂಡುಗಳೆಲ್ಲ ಬತ್ತಲೆಯಾಗಿಯೇ ಜನಿಸಿವೆ. ಶೀಲ, ಅಶ್ಲೀಲ, ಅನೈತಿಕತೆ ಎಲ್ಲವೂ ನಾಗರಿಕ ಜಗತ್ತಿನ ಸೃಷ್ಟಿ. ಭೂತವೆನ್ನುತ್ತದೆ; ''ನೀನು ಅರಿವೆಯನ್ನು ತೊಡಲು ಕಲಿತ ದಿನವೇ ಲೈಂಗಿಕ ಬಾಂಧವ್ಯ, ಕರ್ಮಗಳ ವಿಚಾರದಲ್ಲಿ ಅರಿವೂ ತಪ್ಪಿತು. ನಿಮ್ಮ ನಾಗರಿಕತೆ ಅರಿವೆಯ ನಾಗರಿಕತೆ. ಅರಿವೆ ಹೆಚ್ಚಿದಂತೆ ಅಳತೆ ಮೀರಿದ ಕಾಮದೃಷ್ಟಿ ಬೆಳೆಯಲಿಲ್ಲವೆ? ಅರಿವೆಯಿಂದಲೇ ಅರಿವು ಕೆಟ್ಟಿತು. ಮುಚ್ಚು ಮರೆಯಲ್ಲೇ ಸಾಗುವ ನಮ್ಮ 'ನಾಗರಿಕತೆ ಆತ್ಮ ವಂಚನೆಯ ಸಾಮ್ರಾಜ್ಯ'ವೆಂದು ಕರೆಯುವ ವೈಚಾರಿಕತೆಯಲ್ಲಿ ನಮ್ಮ ಪೌರಾಣಿಕ ಕಥೆಗಳ ವಿಮರ್ಶೆ ನಡೆಯುತ್ತದೆ. ಪಾಂಡುವಿನಿಂದ ಪಡೆಯಲಾಗದ ಮಗುವನ್ನು ಅನ್ಯ ಪುರುಷರಿಂದ ಪಡೆದ ಕುಂತಿ ಸಾಮಾನ್ಯ ಹೆಣ್ಣಿನ ಪ್ರತಿನಿಧಿ. ಅಂಬೆ, ಊಲೂಪಿ, ಚಿತ್ರಾಂಗದೆ ಇವರೆಲ್ಲರ ಜೀವನ ಮಾದರಿಯೂ ನಮಗೆ ನಾವೇ ಕಳುಹಿಸಿದ ಸಂದೇಶ. ಅಂಬೆಯ ಬಂಡಾಯದ ನೆಲೆಯನ್ನು ಚಿಂತಿಸುವ ಕೃಷ್ಣರಾಯ ಅವಳ ಗಟ್ಟಿಗತನವನ್ನು ಮುಕ್ತವಾಗಿ ಶ್ಲಾಘಿಸುತ್ತಾನೆ. ನಾಗರಿಕ ಜಗತ್ತಿನ ಅಸಂಪ್ರದಾಯಿಕ ನಂಬಿಕೆಗಳ ವಿರುದ್ಧ ಬಂಡಾಯ ಸೂಚಿಸುವ ಸಲುವಾಗಿಯೇ ಬನ್ನಿ ಎಂಬ ಅನ್ಯ ಜಾತೀಯ, ಲೈಂಗಿಕ ಶೋಷಣೆಗೆ ಒಳಗಾದ ಹೆಣ್ಣನ್ನು ಅವನು ಮದುವೆಯಾಗುವುದು. ಸ್ತ್ರೀ ಪರಕಾಳಜಿಗೆ ' ಪುರುಷ ಸಂವೇದನೆ' ಮಿಡಿದ ಪ್ರಾಮಾಣಿಕ ಅಭಿವ್ಯಕ್ತಿಗಾಗಿ 'ಸ್ವಪ್ನದ ಹೊಳೆ' ಕಾದಂಬರಿ ಮುಖ್ಯವಾಗುತ್ತದೆ ಮತ್ತು ಪುರುಷನೊಬ್ಬನ ವಿಚಾರ ಜಾಗೃತಿ ಆಧುನಿಕ ಸಂವೇದನೆ ರಚಿಸಿದೆ.

## 'ಕರುಳಿನ ಕರೆ'ಯ ಭಾಗೀರಥಿ

ಕಾರಂತರ ಹೆಣ್ಣುಗಳು ತೋರುವ ಬಂಡಾಯ ಲೈಂಗಿಕ ವಿಷಯಗಳಿಗಾಗಿಯೇ ಎನ್ನುವುದು ಇಲ್ಲಿಯವರೆಗಿನ ಚರ್ಚೆ. ಅದಕ್ಕಿಂತ ಭಿನ್ನವಾದ ರೀತಿಯ ಉಪರೋಧ 'ಕರುಳಿನ ಕರೆ' ಯ ಭಾಗೀರಥಿಯಲ್ಲಿ ಕಂಡು ಬರುತ್ತದೆ. ಗಂಡನ ಹಣದಾಹದ ವಿರುದ್ಧ ಎದ್ದ ಪ್ರತಿಭಟನೆಯ ಕೇಂದ್ರ ಬಿಂದು ಈ ಭಾಗೀರಥಿ. ಕಾರಂತರ ಹಲವು ಕಾದಂಬರಿಗಳು 'ಹೆಣ್ಣು ಹೆಣ್ಣಿಗಾಗಿ ಮರುಗುವ' ಸಹಜ ಚಿತ್ರಣವನ್ನು ನೀಡುತ್ತದೆ. ಬಂಧು- ಬಳಗದ ಮಮತೆ ಹೆಂಗಸರಿಗೇ ಹೆಚ್ಚು. ತವರು ಮನೆಯಿಂದ ಪತಿಯ ಮನೆಗೆ ತೆರಳಿದರೂ ತವರಿನ ಮೋಹ ಹೆಣ್ಣನ್ನು ಹೆಚ್ಚಾಗಿ ಕಾಡುತ್ತದೆ. ತವರಿನ ಮಾನಕ್ಕಾಗಿ ಹೆಣ್ಣು ಎಂಥಹ ತ್ಯಾಗಕ್ಕೂ ಸಿದ್ಧಳಾಗುವುದು ನಮ್ಮ ಸಂಸ್ಕೃತಿಯ ಗುಣ. ಇಲ್ಲಿಯ ಭಾಗೀರಥಿ ಅಂತಹ ತವರಿನ ಮೋಹವುಳ್ಳವಳು. ಬೆಟ್ಟಂಪಾಡಿಯ ಧನಿಕ ಸುಬ್ರಾಯರನ್ನು ಮದವೆಯಾಗಿ ಬಂದ ಭಾಗೀರಥಿ ಗಂಡನ ಹಣ, ಬಡ್ಡಿಯ ವ್ಯವಹಾರದಿಂದ ಬೇಸತ್ತವಳು. ಹಣಕ್ಕಿಂತ ಗುಣವನ್ನೇ ನೋಡುವ ಮನೋವೃತ್ತಿ ಅವಳದ್ದು. ಕಷ್ಟಕ್ಕೆ ಕರಗುವ ಹೃದಯ. ಹಾಗಾಗಿಯೇ ಕಷ್ಟದಲ್ಲಿದ್ದ ತಂಗಿ ಗಂಗೆ ಮತ್ತು ಅವಳ ಗಂಡ ಹಿರಣ್ಯನಿಗೆ ಐದು ಸಾವಿರ ರೂಪಾಯಿ ಸಾಲ ಕೊಡಿಸುತ್ತಾಳೆ. ಇದ್ದವರು ಇಲ್ಲದವರಿಗೆ ಕೊಡುವ ಕಮ್ಯುನಿಸ್ಟ್' ತತ್ವ ಅವಳಿಗೆ ರಕ್ತಗತ.

ಸಾಲದ ಪರಭಾರೆಯನ್ನು ಹೊತ್ತ ಹಿರಣ್ಯ ಕಷ್ಟದಲ್ಲಿಯೇ ಕಾಶೀ ಯಾತ್ರೆ ಮಾಡಿ ಬಂದಿದ್ದ. ಬ್ರಾಹ್ಮಣರನ್ನು ಕರೆಸಿ ಸಮಾರಾಧನೆಯನ್ನೂ ಏರ್ಪಡಿಸಿದ ಸಂದರ್ಭದಲ್ಲಿ ಸುಬ್ರಾಯ ಐದು ಸಾವಿರದ ಸಾಲದ ಜೊತೆಗೆ ಇನ್ನೂ ಐದು ಸಾವಿರ ಸೇರಿಸಿ ತನಗೆ ಈಗಲೇ ಹತ್ತು ಸಾವಿರ ಕೊಡಬೇಕೆಂದು ಜಗಳಕ್ಕೆ ನಿಲ್ಲುತ್ತಾನೆ. ಇದರಿಂದ ಸಮಾರಾಧನೆಗಾಗಿ ಬಂದವರೆಲ್ಲ ಊಟ ಮಾಡದೆ ಹಿಂತಿರುಗುವ ಪರಿಸ್ಥಿತಿ ಒದಗುತ್ತದೆ. ಬ್ರಾಹ್ಮಣರನ್ನು ನೋಯಿಸಿದ ಶಾಪ ತನಗೆಲ್ಲಿ ತಟ್ಟುತ್ತದೆ ಎಂದು ಕೊರಗುವ ಬಂಧುವರ್ಗದ ಶೋಕ ಭಾಗೀರಥಿಯನ್ನು ಕೆಣಕುತ್ತದೆ. ಕೂಡಲೇ ಅವರು ತನ್ನ ಸಣ್ಣ ಮಗ ಶ್ಯಾಮನನ್ನು ಕಟ್ಟಿಕೊಂಡು ಗಂಡನನ್ನು ಬಿಟ್ಟು ಅಣ್ಣ ಸೋಮನಾಥನಲ್ಲಿಗೆ ಬರುತ್ತಾಳೆ. ನಾನು ಇದ್ದ ಹಾಗೆ ಹೊರಟು ಬಂದಿದ್ದೇನೆ. ತಿರುಗಿ, ಆ ಮನೆಯನ್ನು ನೋಡುವ ಆಸೆ ಕಟ್ಟಿಕೊಂಡು ಬಂದಿಲ್ಲ. ನಿನ್ನ ಮಾನ, ಗಂಗೆಯ ಮಾನ, ನನ್ನ ಮಾನ-ನನಗೆಲ್ಲ ಒಂದೇ ಆಗಿದೆ. ಸಾವಿರ ಜನರಿಂದ ಅಪವಾದ ಕೇಳಿ, ನಾನು ಬದುಕಲಾರೆ'' ಎನ್ನುವ ಭಾಗೀರಥಿಯ ನಿರ್ಧಾರದಲ್ಲಿ ಕೋಪ, ದ್ವೇಷ, ನ್ಯಾಯಬುದ್ಧಿ, ಸಮತೂಕ ಸೇರಿದ್ದವು. ಅವಳಲ್ಲಿಯ ಸಾಮಾಜಿಕ ನ್ಯಾಯ ಪರಿಕಲ್ಪನೆ ಅವಳೊಳಗಿನ ಬಂಡಾಯವನ್ನು ಸೂಚಿಸುತ್ತದೆ.

## ದಲಿತ ಮಹಿಳಾ ಸಂವೇದನ

ಸ್ತ್ರೀವಾದಿ ಚಿಂತನೆಯ ನೆಲೆ ಏಕ ಮುಖವಾಗಿಲ್ಲ. ಹೋರಾಟದ ಹಾದಿಗೆ ಪ್ರೇರೇಪಿಸುವ ಧ್ಯೇಯ, ದೃಷ್ಟಿ, ಧೋರಣೆಗಳು ಎಲ್ಲಾ ಮಹಿಳೆಯರಲ್ಲೂ ಒಂದೇ ತೆರನಾಗಿಲ್ಲ. 'ಪಿತೃ ಪ್ರಧಾನ ವ್ಯವಸ್ಥೆಯ ಲಿಂಗಾಧಾರಿತ ರಾಜಕೀಯದಿಂದಾಗಿ ಮಹಿಳೆ ಶೋಷಿತಳಾಗಿದ್ದಾಳೆ' ಎನ್ನುವ ಸಾರ್ವತ್ರಿಕ ಅಭಿಪ್ರಾಯವನ್ನು ಆಧರಿಸಿ ಶೋಷಣೆಯ ಮೂಲ ಶೋಧನೆಗೆ ಹೊರಟರೆ ಅಲ್ಲಿ ಗೋಚರಿಸುವ ಸತ್ಯ, ವರ್ಗ, ವರ್ಣ, ಧರ್ಮಗಳಿಂದ ಆವೃತವಾಗಿ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿ ಕಾಣುತ್ತಲೇ ಹೋಗುತ್ತದೆ. ಆ ಅಂಶದ ಹಿನ್ನೆಲೆಯಲ್ಲಿ ಅರ್ಥವಿಸುವುದಾದರೆ ಭಾರತೀಯ ಮಹಿಳೆಯ ಸಾಮಾಜಿಕ ಸ್ಥಾನ ಮಾನಗಳಲ್ಲಿರುವ ಭಿನ್ನತೆಯೆ ಸ್ತ್ರೀವಾದಕ್ಕಿರುವ ಬಹುಮುಖ ಆಯಾಮಗಳನ್ನು ಸೃಷ್ಟಿಸಿದೆ. ಭಿನ್ನತೆಯನ್ನೇ ವೈವಿಧ್ಯತೆಯನ್ನಾಗಿಸಿಕೊಂಡ ಭಾರತೀಯತೆಯಲ್ಲಿ ಏಕರೂಪವಾದ ಸ್ತ್ರೀವಾದಿ ಸೂತ್ರವನ್ನು ನಿರ್ದಿಷ್ಟವಾಗಿ ನಿರೂಪಿಸುವುದು ಕಷ್ಟವೆನಿಸುತ್ತದೆ. ಎಲ್ಲಾ ಮಹಿಳೆಯರೂ ಒಂದಿಲ್ಲೊಂದು ವಿಧದಲ್ಲಿ ಅರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ, ಲೈಂಗಿಕವಾಗಿ ಶೋಷಿತರು ಎನ್ನುವ ಸಾಮಾನ್ಯ ತಿಳುವಳಿಕೆಯೊಂದಿಗೆ ಭಾರತೀಯ ಸ್ತ್ರೀವಾದವನ್ನು ನಿರೂಪಿಸಬಹುದೆಂದು ಕಂಡರೂ ಅದರ ವಸ್ತುನಿಷ್ಠ ಸ್ವರೂಪದ ಚಿಂತನೆಗೆ ತೊಡಗಬೇಕಾದರೆ ಆಯಾಯ ವರ್ಗ, ವರ್ಣ, ಧರ್ಮ, ಜಾತೀಯ ನೆಲೆಯನ್ನೇ ಆಶ್ರಯಿಸಬೇಕಾಗುತ್ತದೆ. ಸ್ತ್ರೀ ಸಮುದಾಯದ ಅಂತರ್ ವಿಂಗಡಣೆ ಅಥವಾ ಒಳ ವಿಂಗಡಣೆಯು ರೂಪಿಸುವ ಅಧ್ಯಯನವು ಹೆಚ್ಚು ಆಳವಾಗಿ, ಹೆಚ್ಚು ಸೂಕ್ಷ್ಮವಾಗಿ ನಡೆಸಲು ಸಾಧ್ಯವಿರುವುದರಿಂದ ಸ್ತ್ರೀ ಸಂವೇದನೆಯ ವಿಶಿಷ್ಟತೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

## ಉಪಸಂಹಾರ

ವ್ಯಕ್ತಿಯ ಜೀವನ ವಿಧಾನಕ್ಕೆ ಆಧಾರವಾಗಿ ಪರಂಪರೆಯು ರೂಢಿಸಿಕೊಂಡು ಬಂದ ಮೌಲ್ಯಗಳು ವಿಘಟನೆಗೆ ಒಳಪಡದೆ ಹಾಗೆಯೇ ಸ್ಥಾಯಿ ಯಾಗಿ ಉಳಿಯುವುದಿಲ್ಲ. ನಿರ್ದಿಷ್ಟ ಜೀವನ ವಿಧಾನ ಮತ್ತು ದೃಷ್ಟಿಗಳು ರೂಪಿಸಿದ ಈ ಮೌಲ್ಯ ಸಂಘಟನೆಯ ಕಾಲಿಕ ಅವಧಿ ಅಥವಾ 'ಯುಗ' ಹೊಸದು ಹಳೆಯದರ ಕೊಂಡಿ.

ವ್ಯಕ್ತಿ ಮತ್ತು ಸಮಾಜದ ನಡುವೆ, ವ್ಯಕ್ತಿಯ ಒಳಗೆ ಎರಡು ಪ್ರವೃತ್ತಿಗಳ ಅಥವಾ ಶ್ರದ್ಧೆಗಳ ನಡುವೆ ಸಂಘರ್ಷ ಉಂಟಾಗುತ್ತದೆ. ಕೆಲವೊಮ್ಮೆ ಅದು ಹಿಂಸಾತ್ಮಕವಾಗಿಯೂ ಪ್ರಕಟವಾಗುತ್ತದೆ. ಬೌದ್ಧಿಕ ವಿನ್ಯಾಸದಲ್ಲಿ ರೂಪಗೊಳ್ಳುವ ಈ ಮೌಲ್ಯ ಸಂಘರ್ಷದ ಕುರಿತಾದ ಪ್ರಜ್ಞೆ ಪ್ರಜ್ಞಾಪೂರ್ವಕ ಸಂವೇದನೆಯಾಗಿಯೂ ಕಾಣಿಸಿಕೊಳ್ಳುತ್ತದೆ. ಈ ಸಂಘರ್ಷದಿಂದ ಉಂಟಾಗುವ ಪ್ರತಿರೋಧ ನಮ್ಮ ಪರಂಪರಾಗತ ಮೌಲ್ಯ, ಆಚಾರ ವಿಚಾರಗಳು ಪುನರ್ ಮೌಲ್ಯಮಾಪನಕ್ಕೆ ಮಾನವೀಯ ಸಂವೇದನೆಗೂ ಒಳಗಾಗುವುದರಿಂದ ಸಂಸ್ಕೃತಿ ಎಂದರೆ 'ಹಳೆಯದರ ಒಡಂಬಡಿಕೆಯಲ್ಲಿ ವರ್ತಮಾನದ ಹೊಳಹುಗಳ ಮಧ್ಯೆ ಬದುಕು' ಬದಲಾವಣೆಗೊಂಡು ಭವಿಷ್ಯದತ್ತ ಹೆಜ್ಜೆ ಇಡುವ ಪರಂಪರೆ ಆಗಬೇಕು.

ಒಟ್ಟಾರೆಯಾಗಿ ಕಾರಂತರ ಕಾದಂಬರಿಗಳಲ್ಲಿ ವೈಚಾರಿಕತೆ ಮೇಳೈಸಿದೆ. ಪಾರಂಪರಿಕ ಚಿಂತನೆಗಳನ್ನು, ಮೂಢನಂಬಿಕೆಗಳನ್ನು ವಿರೋಧಿಸುವ ಪ್ರಬಲ ಪಾತ್ರಗಳು ಕಾಣಸಿಗುತ್ತವೆ. ಪ್ರತಿರೋಧದ ನೆಲೆಯ ಅಂಶಗಳು ಸರಸಮ್ಮನ ಸಮಾಧಿ, ಧರ್ಮರಾಯನ ಸಂಸಾರದಲ್ಲಿ ಹೆಚ್ಚು ಚರ್ಚಿತವಾಗಿವೆ.

## ಆಕರ ಗ್ರಂಥಗಳು


1. ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ; ಮಾಲಿನಿ ಮಲ್ಯ-2002
2. ಕಾರಂತ ಶಿವರಾಮ- ಮರಳಿ ಮಣ್ಣಿಗೆ- ಸಪ್ನ ಬುಕ್ ಹೌಸ್, ಗಾಂಧಿ ನಗರ
3. ಬತ್ತದ ತೊರೆ-ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ- ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
4. ಶಿವರಾಮ ಕಾರಂತರ ಲೇಖನಗಳು, ಸಂಪುಟ 4, ಕನ್ನಡ ಮತ್ತು ಸಂಸ್ಕೃತಿ ಇಲಾಖೆ
5. ಶಿವರಾಮ ಕಾರಂತರ ಬೆಲೆ ಬಾಳುವ ಬರಹಗಳು- ಮಾಲಿನಿ ಮಲ್ಯ
6. ಸಪ್ನದ ಹೊಳೆ: ಶಿವರಾಮ ಕಾರಂತ- 1966 ಸಪ್ನ ಬುಕ್ ಹೌಸ್
7. ಸರಸಮ್ಮನ ಸಮಾಧಿ- ಶಿವರಾಮ ಕಾರಂತ- ಸಪ್ನ ಬುಕ್ ಹೌಸ್
8. ಮರಳಿ ಮಣ್ಣಿಗೆ: ಶಿವರಾಮ ಕಾರಂತ- ಸಪ್ನ ಬುಕ್ ಹೌಸ್, ಬೆಂಗಳೂರು
9. ಕರುಳಿನ ಕರೆ: ಶಿವರಾಮ ಕಾರಂತ-1949
10. ಬತ್ತದ ತೊರೆ: ಶಿವರಾಮ ಕಾರಂತ-1953